# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.49 ಲಿಂಗರಾಜಪುರ ವಾರ್ಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಲಿಂಗರಾಜಪುರ ವಾರ್ಡ್ ಕಛೇರಿಯ ಕಟ್ಟಡದಲ್ಲಿ ದಿನಾಂಕ: 06-08-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದ ಸದಸ್ಯರು,

1) ಶ್ರೀ ಅಜ್ಮಲ್ ~~ಪಾಷಾ~~, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,

2) ಶ್ರೀ ಹೆಚ್.ಎ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,

3) ಶ್ರೀ ವೆಂಕಟೇಶ್ ವೈದ್ಯಾಧಿಕಾರಿಗಳು, ಲಿಂಗರಾಜಪುರ

4) ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ,

5) ಶ್ರೀಮತಿ / ಮಿಸೆಸ್ ಪಿಂಟೋ, ಸ್ಥಳೀಯರು, ಲಿಂಗರಾಜಪುರ,

6) ಶ್ರೀ ಉಮೇಶ್.ಆರ್, ಸ್ಥಳೀಯರು, ಲಿಂಗರಾಜಪುರ,

**ಹಾಜರಿದ್ದ ಅಧಿಕಾರಿಗಳು**

1) ಶ್ರೀ ವಿಜಯ್, ಕಿರಿಯ ಆರೋಗ್ಯ ನಿರೀಕ್ಷಕರು

2) ಶ್ರೀ ಕೃಷ್ಣಮೂರ್ತಿ, ಕಂದಾಯ ನಿರೀಕ್ಷಕರು

3) ಕು॥ ರಜನಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು

4) ಸಹಾಯಕ ಸಬ್ ಇನ್ಸ್‌ಪೆಕ್ಟರ್, ಸಂಚಾರ

5) ಕು॥ ಪೂಜಾ.ಎಂ, ಸಹಾಯಕ ಅಭಿಯಂತರರು, ಲಿಂಗರಾಜಪುರ

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ, ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

1) **ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ, ರವರು ಮಾತನಾಡಿ,** ಮುನಿತಾಯಪ್ಪ ಬಡಾವಣೆಯಲ್ಲಿ ರಸ್ತೆ ಸೂಚನಾ ಫಲಕಗಳು ಎರಡು ಕಡೆ ಒಂದೇ ಸೂಚನಾ ಫಲಕಗಳನ್ನು ಅಳವಡಿಸಿರುತ್ತಾರೆ. ಇದನ್ನು ಪರಿಶೀಲಿಸಿ, ಕ್ರಮ ಬದ್ದವಾಗಿ ಅಳವಡಿಸಿಕೊಡಲು ಕೋರಿದಾಗ, ಸಭೆಯಲ್ಲಿ ಚರ್ಚಿಸಿ, ಸಭಾ ಅಧ್ಯಕ್ಷರು ಈ ವಿಷಯವು ಕಂದಾಯ ವಿಭಾಗಕ್ಕೆ ಒಳಪಟ್ಟಿರುತ್ತದೆ ಹಾಗೂ ಇದೀಗ ವಾರ್ಡ್ ಮರುವಿಂಗಡಣೆಯಾಗುತ್ತಿದ್ದು, ತದನಂತರ ಪರಿಶೀಲಿಸಿ ಕ್ರಮಬದ್ದವಾಗಿ ಅಳವಡಿಸಿಕೊಡಲಾಗುವುದು ಎಂದು ತಿಳಿಸಿದರು.

2) <u>ಶ್ರೀಮತಿ / ಮಿಸೆಸ್ ಪಿಂಟೋ, ಸ್ಥಳೀಯರು, ಲಿಂಗರಾಜಪುರ, ರವರು ಮಾತನಾಡಿ,</u> ವಾರ್ಡ್ ಪ್ರದೇಶದ ಖಾಲಿ ನಿವೇಶನಗಳಲ್ಲಿ ಸ್ಥಳೀಯರು ಕಸ, ಇತ್ಯಾದಿ ಅನುಪಯುಕ್ತ ವಸ್ತುಗಳನ್ನು ಎಸೆಯುತ್ತಿದ್ದು, ಇದರಿಂದ ಕಲುಷಿತ ವಾತಾವರಣ ಉಂಟಾಗಿ, ಸ್ಥಳೀಯರಿಗೆ ತೊಂದರೆಯಾಗುತ್ತಿರುತ್ತದೆ ಎಂದು ಸಭಾ ಗಮನಕ್ಕೆ ತಂದಾಗ, ಈ ಬಗ್ಗೆ ಚರ್ಚಿಸಿ, ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ನಿರೀಕ್ಷಕರಿಗೆ ನಿಗಾವಹಿಸಲು ಹಾಗೂ ಮಾರ್ಷಲ್‌ಗಳ ಮುಖಾಂತರ ದಂಡ ವಿಧಿಸಲು ಸೂಚಿಸಿದರು.

3) <u>ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ, ರವರು ಮಾತನಾಡಿ,</u> ಮುನಿತಾಯಪ್ಪ ಬಡಾವಣೆಯಲ್ಲಿ ಕಾವೇರಿ ನೀರು ಸಮರ್ಪಕವಾಗಿ ಸರಬರಾಜು ಆಗುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿದಾಗ, ಈ ಬಗ್ಗೆ ಚರ್ಚಿಸಿ, ಮಾನ್ಯ ಅಧ್ಯಕ್ಷರು ಹಾಲೀ ಸರಬರಾಜು ಮಾಡುತ್ತಿರುವ ಸಮಯವನ್ನು ಮತ್ತಷ್ಟು ವಿಸ್ತರಿಸಿ, ನೀರು ಸರಬರಾಜು ಮಾಡಲು ಜಲಮಂಡಳಿ ಅಧಿಕಾರಿಗಳಿಗೆ ಸೂಚಿಸಿದರು.

4) <u>ಸಹಾಯಕ ಸಬ್ ಇನ್ಸ್‌ಪೆಕ್ಟರ್, ಸಂಚಾರ ರವರು ಮಾತನಾಡಿ,</u> ಹೆಣ್ಣೂರು ಮುಖ್ಯರಸ್ತೆ ಮತ್ತು ಆಯಿಲ್ ಮಿಲ್ ರಸ್ತೆಯಲ್ಲಿ ಸಣ್ಣ ಪುಟ್ಟ ರಸ್ತೆ ಗುಂಡಿಗಳು ಇರುವುದಾಗಿ ತಿಳಿಸಿದಾಗ, ಈ ಬಗ್ಗೆ ಚರ್ಚಿಸಿ ಸಭೆಯಲ್ಲಿ ಹಾಜರಿದ್ದ ಅಭಿಯಂತರರು ಆಯಿಲ್ ಮಿಲ್ ರಸ್ತೆಯಲ್ಲಿರುವ ಸಣ್ಣ ಪುಟ್ಟ ರಸ್ತೆ ಗುಂಡಿಗಳಿಗೆ ಈಗಾಗಲೇ ವೆಟ್ ಮಿಕ್ಸ್ ತುಂಬಿಸಿ, ಸಮತಟ್ಟು ಮಾಡಲಾಗಿರುತ್ತದೆ. ಹೆಣ್ಣೂರು ಮುಖ್ಯರಸ್ತೆಯು ಬೃಹತ್ ರಸ್ತೆ, ವಿಭಾಗಕ್ಕೆ ಒಳಪಡುವ ರಸ್ತೆಗಳಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

5) <u>ಶ್ರೀ ವೆಂಕಟೇಶ್ ವೈದ್ಯಾಧಿಕಾರಿಗಳು, ಲಿಂಗರಾಜಪುರ ರವರು ಮಾತನಾಡಿ,</u> ಲಿಂಗರಾಜಪುರ 01 ಪಾಸಿಟಿವ್ ಪ್ರಕರಣ ದೃಢಪಟ್ಟಿದ್ದು, ಹೋಮ್ ಕ್ವಾರಂಟೈನ್‌ನಲ್ಲಿರುತ್ತಾರೆ ಹಾಗೂ ಪ್ರಸ್ತುತ 12 ರಿಂದ 18 ವಯೋಮಾನದವರಿಗೆ ಶಾಲೆ ಹಾಗೂ ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ಹಾಗೂ ಬೂಸ್ಟರ್ ಡೋಸ್ ಹಾಕಲಾಗುತ್ತಿದ್ದು ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳನ್ನು ಕೂಡಲೇ ಅನುಷ್ಠಾನಕ್ಕೆ ತರಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು | ಅಧ್ಯಕ್ಷರು |
| ಸಹಾಯಕ ಅಭಿಯಂತರರು | (ನೋಡೆಲ್ ಅಧಿಕಾರಿಗಳು) |
| ವಾರ್ಡ್ ಸಂಖ್ಯೆ.49, ಲಿಂಗರಾಜಪುರ | ವಾರ್ಡ್ ಸಂಖ್ಯೆ.49, ಲಿಂಗರಾಜಪುರ |

<u>ಪ್ರತಿಯನ್ನು</u>

1) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ವಾರ್ಡ್ ಕಮಿಟಿಯ ಸದಸ್ಯರಿಗೆ.